ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ
UNIVERSITY OF HORTICULTURAL SCIENCES, BAGALKOT

I.C.A.R. - KRISHI VIGYAN KENDRA, KOLAR
ಐ.ಸಿ.ಎ.ಆರ್ – ಕೃಷಿ ವಿಜ್ಞಾನ ಕೇಂದ್ರ, ಕೋಲಾರ



e- NEWS LETTER / ಇ– ವಾರ್ತಾ ಪತ್ರಿಕೆ

ಸಂಚಿಕೆ: 4 | ಜುಲೈ–ಸೆಪ್ಟೆಂಬರ್ 2016 | ಸಂಪುಟ: 2

## ಗೌರವಾನ್ವಿತ ಕುಲಪತಿಗಳ ನುಡಿಗಳು



ಡಾ. ಡಿ. ಎಲ್. ಮಹೇಶ್ವರ್

ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ಕೇಂದ್ರ ಸರ್ಕಾರದ ರಾಷ್ಟ್ರೀಯ ಪೌಷ್ಟಿಕ ಸಪ್ತಾಹ ಕಾರ್ಯಕ್ರಮವನ್ನು ಶಾಲಾ ಮಕ್ಕಳು ಹಾಗೂ ಗೃಹಿಣಿಯರಿಗೆ ಅಪೌಷ್ಟಿಕತೆಯ ಬಗ್ಗೆ ಅರಿವು ಮೂಡಿಸಲು ಹಮ್ಮಿಕೊಂಡಿರುವುದು ಉತ್ತಮ ನಡೆ. ಇತ್ತೀಚಿಗೆ ಹುಣಸೆ ಬೆಳೆಗಾರರ ಅಭಿವೃದ್ಧಿಗಾಗಿ ಹುಣಸೆಬೆಳೆ ವಿಚಾರ ಸಂಕಿರಣ, ರೇಷ್ಮೆ ಬೆಳೆಗಾರರಿಗೆ ತಾಂತ್ರಿಕ ಸೇವಾ ಕೇಂದ್ರವಾರು ತರಬೇತಿ ಕಾರ್ಯಕ್ರಮಗಳು ಹಾಗೂ ಕೋಲಾರದ ನಗರವಾಸಿಗಳಿಗೆ ಹಲಸಿನ ಮೌಲ್ಯವರ್ಧಿತ ಪದಾರ್ಥಗಳ ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಆಯೋಜಿಸಿದ್ದು, ರೈತರ ಅಭಿವೃದ್ಧಿಗಾಗಿ ವಿಸ್ತರಣಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ಆಯೋಜಿಸಿ ಇನ್ನೂ ಹೆಚ್ಚಿನ ಪ್ರಗತಿ ಸಾಧಿಸಲೆಂದು ಹಾರೈಸುತ್ತೇನೆ.

## ಹುಣಸೆ ಬೆಳೆಯ ವಿಚಾರ ಸಂಕಿರಣ



ದಿನಾಂಕ 22.07.2016 ರಂದು ತೋಟಗಾರಿಕೆ ಮಹಾವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿ ಇವರ ಸಂಯುಕ್ತಾಶ್ರಾಯದಲ್ಲಿ **"ಹುಣಸೆ ಬೆಳೆಯ ವಿಚಾರ ಸಂಕಿರಣ"** ಕಾರ್ಯಕ್ರಮವನ್ನು ತೋಟಗಾರಿಕೆ ಮಹಾವಿದ್ಯಾಲಯ ಆವರಣ, ಕೋಲಾರದಲ್ಲಿ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಶಿಕ್ಷಣ ನಿರ್ದೇಶಕರಾದ ಡಾ. ಜೆ. ವೆಂಕಟೇಶ್ ರವರು ನೇರವೇರಿಸಿ ಇಡೀ ವಿಶ್ವದಲ್ಲೇ ಸಾಂಬಾರು ಬೆಳೆಯುವ ರಾಷ್ಟ್ರದಲ್ಲಿ ಭಾರತ ಪ್ರಥಮ ಸ್ಥಾನದಲ್ಲಿದೆ. ಹುಣಸೆಯ ಉತ್ಪಾದನೆ ತಾಂತ್ರಿಕತೆ ಮತ್ತು ವಿವಿಧ ಔಷಧ ಗುಣಗಳ ಬಗ್ಗೆ ಮಾಹಿತಿ ನೀಡಿದರು. ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ರಾಜ್ಯ ಸಾಂಬಾರು ಪದಾರ್ಥಗಳ ಅಭಿವೃದ್ಧಿ ಮಂಡಳಿಯ ಅಧ್ಯಕ್ಷರಾದ ಶ್ರೀ ಮಹಮ್ಮದ ಮುಜಮ್ಮಿಲ್ ಕಾಜೀಯಾ ರವರು ಮಂಡಳಿಯ ಮುಖ್ಯ ಉದ್ದೇಶಗಳ ಬಗ್ಗೆ ತಿಳಿಸಿದರು. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆಯ ಸಂಶೋಧನಾ ನಿರ್ದೇಶಕರಾದ ಡಾ. ವಿ. ನಾಚೇಗೌಡ ರವರು, ಹುಣಸೆಯಲ್ಲಿ ಅಧಿಕ ಲಾಭ ಪಡೆಯಲು ಸುಧಾರಿತ ಬೇಸಾಯ ಪದ್ಧತಿಗಳ ಬಗ್ಗೆ ಮಾಹಿತಿ ನೀಡಿದರು. ವಿಸ್ತರಣಾ ನಿರ್ದೇಶಕರಾದ ಡಾ. ವೈ. ಕೆ. ಕೋಟಿಕಲ್ ಮತ್ತು ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಕೆ. ತುಳಸಿರಾಮ್‌ರವರು ಹುಣಸೆಯಲ್ಲಿ ಬರುವ ಕೀಟ ಮತ್ತು ರೋಗಗಳ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಕೆ.ಆರ್. ವಾಸುದೇವ ಹುಣಸೆಯಲ್ಲಿ ಕೊಯ್ಲೋತ್ತರ ತಂತ್ರಜ್ಞಾನಗಳ ಬಗ್ಗೆ ತಿಳಿಸಿದರು. ಶ್ರೀ ಸುರೇಶ ವ್ಹಿ. ಕುಂಬಾರರವರು ಹುಣಸೆಯ ಪ್ರಾಮುಖ್ಯತೆ ಬಗ್ಗೆ ರೈತರಿಗೆ ಮಾಹಿತಿ ನೀಡಿದರು. ಸದರಿ ಕಾರ್ಯಕ್ರಮದಲ್ಲಿ ತೋಟಗಾರಿಕೆ ಮಹಾವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಎಲ್ಲಾ ಸಿಬ್ಬಂದಿಗಳು, ತೋಟಗಾರಿಕೆ ಇಲಾಖೆಯ ಅಧಿಕಾರಿ ವರ್ಗದವರು ಹಾಗೂ ಸುಮಾರು 70 ರೈತರು ಭಾಗವಹಿಸಿ ಹುಣಸೆ ಬೆಳೆಯ ವಿಚಾರ ಸಂಕಿರಣದ ಪ್ರಯೋಜನ ಪಡೆದುಕೊಂಡರು.



## ಹಲಸು ಮೇಳ

ಕೃಷಿ ವಿಜ್ಞಾನ ಕೇಂದ್ರ, ತೋಟಗಾರಿಕೆ ಮಹಾವಿದ್ಯಾಲಯ ಮತ್ತು ಸೀಡ್ ಸಂಸ್ಥೆ, ಕೋಲಾರ ಸಹಯೋಗದಲ್ಲಿ ದಿನಾಂಕ 28 ಹಾಗೂ 29 ಸೆಪ್ಟೆಂಬರ್ 2016 ರಂದು ನಗರದ ಸರಕಾರಿ ಪ್ರಥಮ ದರ್ಜೆ ಕಾಲೇಜು ಮುಂಭಾಗದಲ್ಲಿ ಹಲಸಿನ ಮೌಲ್ಯವರ್ಧಿತ ಪದಾರ್ಥಗಳ ಪ್ರದರ್ಶನ ಹಾಗೂ ಮಾರಾಟ ಮೇಳವನ್ನು ಆಯೋಜಿಸಲಾಗಿತ್ತು. ತೋಟಗಾರಿಕೆ ಇಲಾಖೆಯ ಉಪನಿರ್ದೇಶಕ ಶ್ರೀ. ಎಂ.ಎಸ್. ರಾಜು ಮೇಳಕ್ಕೆ ಚಾಲನೆ ನೀಡಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಕೆ. ತುಳಸಿರಾಮ್ ಮಾತನಾಡಿ, ಹಲಸಿನಿಂದ ವಿವಿದ ರೀತಿಯ ಮೌಲ್ಯವರ್ಧಿತ ಪದಾರ್ಥಗಳ ತಯಾರಿಕೆ ಬಗ್ಗೆ ಅರಿವು ಮೂಡಿಸಲು ಈ ಮೇಳ ಆಯೋಜಿಸಲಾಗಿದೆ ಎಂದು ತಿಳಿಸಿದರು. ದಿನಾಂಕ 26 ಹಾಗೂ 27 ಸೆಪ್ಟೆಂಬರ್ 2016 ರಂದು 2 ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಸೀಡ್ ಸಂಸ್ಥೆಯ ಮಹಿಳಾ ಸದಸ್ಯರಿಗೆ ಕೃಷಿ ವಿಜ್ಞಾನ ಕೇಂದ್ರವು ಹಲಸಿನ ಹಣ್ಣಿನಿಂದ ವಿವಿಧ ಪದಾರ್ಥಗಳನ್ನು ತಯಾರಿಸುವ ಕೌಶಲವನ್ನು ಡಾ. ಜಿ.ಎಸ್. ಚಿಕ್ಕಣ್ಣ, ವಿಜ್ಞಾನಿ (ಗೃಹ ವಿಜ್ಞಾನ) ರವರು ತಿಳಿಸಿಕೊಟ್ಟರು. ಡಾ. ಬಸವರಾಜು ಟಿ. ಬಿ. ಪ್ರಾಧ್ಯಾಪಕರು, ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ಮತ್ತು ಸೀಡ್ಸ್ ಸಂಸ್ಥೆಯ ಕಾರ್ಯಕ್ರಮ ಸಂಯೋಜಕಿ ಮಲ್ಲಮ್ಮ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಪ್ರಾಯೋಗಿಕವಾಗಿ ಮಹಿಳಾ ಸದಸ್ಯರೇ ತಯಾರಿಸಿದ ಹಲಸಿನ ನಾನಾ ಪದಾರ್ಥಗಳನ್ನು ತಯಾರಿಸಿ ಮಾರಾಟ ಮಾಡಲಾಯಿತು. ಮೇಳದಲ್ಲಿ ಹಲಸಿನ ಹಣ್ಣಿನಿಂದ ತಯಾರಿಸಿದ ಚಿಪ್ಸ್, ಜಾಮ್, ಹಲ್ವಾ, ಜ್ಯೂಸ್, ಮಂಚೂರಿ, ಬೋಂಡ, ಹಲಸಿನ ತೊಳೆಗಳನ್ನು ಪ್ರದರ್ಶನಕ್ಕಿಟ್ಟು ಮಾರಾಟ ಮಾಡಲಾಯಿತು. ಕಾಲೇಜು ವಿದ್ಯಾರ್ಥಿಗಳು, ಸಾರ್ವಜನಿಕರು ಮೇಳಕ್ಕೆ ಬಂದು ಹಲಸಿನಿಂದ ತಯಾರಿಸಿದ ನಾನಾ ಪದಾರ್ಥಗಳನ್ನು ಖರೀದಿಸಿ ರುಚಿ ಆಸ್ವಾದಿಸಿದರು. ಸದರಿ ಮೇಳದಲ್ಲಿ 800 ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಂಡರು.






## ರಾಷ್ಟ್ರೀಯ ಪೌಷ್ಟಿಕ ಸಪ್ತಾಹ – 2016




ಕೃಷಿ ವಿಜ್ಞಾನ ಕೇಂದ್ರ, ಕೋಲಾರವು ರಾಷ್ಟ್ರೀಯ ಪೌಷ್ಟಿಕ ಸಪ್ತಾಹವನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೋಲಾರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕರ ಶಿಕ್ಷಣ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಕೋಲಾರ ಇವರ ಸಂಯುಕ್ತಾಶ್ರಯದಲ್ಲಿ **"ಗ್ರಾಮೀಣ ಭಾಗದಲ್ಲಿನ ಅಪೌಷ್ಟಿಕತೆಯ ನಿಯಂತ್ರಣ"** ಎನ್ನುವ ಘೋಷಣೆಯೊಂದಿಗೆ ದಿನಾಂಕ 01.09.2016 ರಿಂದ 07.09.2016 ರವರೆಗೆ ಕೋಲಾರ ಜಿಲ್ಲೆಯ ವಿವಿಧ ಗ್ರಾಮ, ಶಾಲಾ-ಕಾಲೇಜು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಆಚರಿಸಲಾಯಿತು. ಉದ್ಘಾಟನ ಕಾರ್ಯಕ್ರಮವನ್ನು ತೋಟಗಾರಿಕೆ ಮಹಾವಿದ್ಯಾಲಯದ ಸಭಾಂಗಣದಲ್ಲಿ ದಿನಾಂಕ 01.09.2016 ರಂದು ಹಮ್ಮಿಕೊಳ್ಳಲಾಯಿತು. ಉದ್ಘಾಟನೆಯನ್ನು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೋಲಾರದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಶ್ರೀ ರಾಜೇಂದ್ರ ಬಾದಾಮಿಕರ ನೆರವೇರಿಸಿ ರಾಷ್ಟ್ರೀಯ ಪೌಷ್ಟಿಕ ಸಪ್ತಾಹದ ಮಹತ್ವದ ಬಗ್ಗೆ ಮಾಹಿತಿ ನೀಡಿದರು. ತೋಟಗಾರಿಕೆ ಮಹಾವಿದ್ಯಾಲಯದ ಡೀನ್‌ರಾದ ಡಾ. ಕೆ.ಎಸ್. ಶ್ರೀನಿವಾಸ ಅದ್ಯಕ್ಷತೆ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಕೋಲಾರದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಶ್ರೀ ಗುರುರಾಜ ಜಿ. ಶಿರೋಳ, ಡಾ. ಎಸ್.ಎಸ್. ವಿಜಯಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಕೋಲಾರ, ಶ್ರೀಮತಿ ಭಾಗ್ಯ ಮಹದೇವಪ್ಪ, ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಶ್ರೀ ಆಂಜನಪ್ಪ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೆ. ತುಳಸಿರಾಮ್, ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಭಾಗವಹಿಸಿದ್ದರು. ಸಂಪನ್ಮೂಲ ವ್ಯಕ್ತಿಗಳಾಗಿ ಡಾ. ಚಿಕ್ಕಣ್ಣ ಜಿ.ಎಸ್, ವಿಜ್ಞಾನಿ (ಗೃಹ ವಿಜ್ಞಾನ), ಶ್ರೀ. ಬಿ. ಪ್ರಸನ್ನ, ಆರೋಗ್ಯ ಶಿಕ್ಷಣಾಧಿಕಾರಿಗಳು ಹಾಗೂ ಡಾ. ಮಾಧವಿ ರೆಡ್ಡಿ ಸಹಾಯಕ ಪ್ರಾಧ್ಯಾಪಕರು, ಶ್ರೀ. ದೇವರಾಜ ಅರಸ್ ಮೆಡಿಕಲ್ ಕಾಲೇಜು ಇವರು ಗ್ರಾಮೀಣ ಭಾಗದಲ್ಲಿನ ಅಪೌಷ್ಟಿಕತೆ ಮತ್ತು ಸಮತೋಲನ ಆಹಾರದ ಬಗ್ಗೆ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ 180 ಕ್ಕೂ ಹೆಚ್ಚು ಅಂಗನವಾಡಿ ಹಾಗೂ ಆಶಾ ಕಾರ್ಯಕರ್ತೆಯರು, ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಂಡರು.



## ರಾಷ್ಟ್ರೀಯ ಪೌಷ್ಠಿಕ ಸಪ್ತಾಹವನ್ನು ಆಯೋಜಿಸಿದ ವಿವರಗಳು

| ಕ್ರ.ಸಂ | ದಿನಾಂಕ | ವಿಷಯ | ಸ್ಥಳ | ಭಾಗವಹಿಸಿದವರ ಸಂಖ್ಯೆ |
|---|---|---|---|---|
| 1 | 01.09.2016 | ರಾಷ್ಟ್ರೀಯ ಪೌಷ್ಠಿಕ ಸಪ್ತಾಹ ದಿನಾಚರಣೆಯ ಮಹತ್ವ | ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ | 180 |
| 2 | 02.09.2016 | ಗ್ರಾಮೀಣ ಭಾಗದಲ್ಲಿನ ಅಪೌಷ್ಠಿಕತೆ ಮತ್ತು ಅದರ ಪರ್ಯಾಯ ಉಪಾಯಗಳು | ಜೂನಿಯರ್ ಕಾಲೇಜ್, ನರಸಾಪುರ | 225 |
| 3 | 03.09.2016 | ಉತ್ತಮ ಆರೋಗ್ಯದಲ್ಲಿ ಹಣ್ಣು ಮತ್ತು ತರಕಾರಿಗಳ ಪಾತ್ರ | ಸಬರಮತಿ ಹೈಸ್ಕೂಲ್, ಸುಗಟೂರು | 250 |
| 4 | 06.09.2016 | ಸಮತೋಲಿತ ಆಹಾರದ ಬಗ್ಗೆ ತಿಳುವಳಿಕೆ | ಸರ್ಕಾರಿ ಕಿರಿಯ ಪದವಿಪೂರ್ವ ವಿದ್ಯಾಲಯ, ವೆಮಗಲ್ | 261 |
| 5 | 07.09.2016 | ಅಪೌಷ್ಠಿಕತೆ ನಿವಾರಣೆ ಮತ್ತು ಅದರ ಬಗ್ಗೆ ಜಾಗೃತಿ | ವಿದ್ಯಾಭಿವೃದ್ಧಿ ಪ್ರೌಢಶಾಲೆ, ವಕ್ಕಲೇರಿ. | 250 |

## ಅರಿವು ಮೂಡಿಸುವ ಕಾರ್ಯಕ್ರಮ

ದಿನಾಂಕ 29.08.2016 ರಂದು ರೇಷ್ಮೆ ಇಲಾಖೆ ಕೋಲಾರ, ಪ್ರಾದೇಶಿಕ ರೇಷ್ಮೆ ಸಂಶೋಧನಾ ಕೇಂದ್ರ, ಕೊಡತಿ ಮತ್ತು ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಇವರ ಸಂಯುಕ್ತಾಶ್ರಯದಲ್ಲಿ ಕೋಲಾರ ತಾಲ್ಲೂಕು ವ್ಯಾಪ್ತಿಯ ರೇಷ್ಮೆ ಬೆಳೆಗಾರರಿಗೆ **"ಅರಿವು ಮೂಡಿಸುವ ಕಾರ್ಯಕ್ರಮ"** ತೋಟಗಾರಿಕೆ ಮಹಾವಿದ್ಯಾಲಯ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ನರವೇರಿಸಿ ಡಾ. ಜಲಜಾ ಕುಮಾರ್, ಜಂಟಿ ನಿರ್ದೇಶಕರು, ಪ್ರಾದೇಶಿಕ ರೇಷ್ಮೆ ಸಂಶೋಧನ ಕೇಂದ್ರ, ಕೊಡತಿ ಬೆಂಗಳೂರು ರವರು ನೂತನ ಹಿಪ್ಪುನೇರಳೆ ತಳಿಗಳ ಬಗ್ಗೆ ಮಾಹಿತಿ ನೀಡಿದರು. ಶ್ರೀ. ಎಸ್. ವಿ. ಕುಮಾರ್, ರೇಷ್ಮೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಕೋಲಾರರವರು ಅಧ್ಯಕ್ಷತೆ ವಹಿಸಿದ್ದು, ಯಶಸ್ವಿ ದ್ವಿತಳಿ ರೇಷ್ಮೆಗೂಡು ಉತ್ಪಾದನೆಯ ತಾಂತ್ರಿಕತೆಗಳ ಬಗ್ಗೆ ಮಾಹಿತಿ ನೀಡಿದರು. ಬೆಂಗಳೂರು ಪ್ರಾದೇಶಿಕ ರೇಷ್ಮೆ ಸಂಶೋಧನ ಕೇಂದ್ರದ ವಿಜ್ಞಾನಿಗಳಾದ ಡಾ. ಪಿ. ಸುಧಾಕರ್‌ರವರು ಹಿಪ್ಪುನೇರಳೆ ಬೇಸಾಯದಲ್ಲಿ ಮರ ಪದ್ಧತಿ ನಿರ್ವಹಣೆ ಮತ್ತು ನೀರಿನ ಸದ್ಬಳಕೆ ಬಗ್ಗೆ ತಿಳಿಸಿದರು. ಕೃಷಿ ವಿಜ್ಞಾನ ಕೇಂದ್ರ, ಕೋಲಾರದ





ವಿಜ್ಞಾನಿಗಳಾದ ಡಾ. ರಘುನಾಥರೆಡ್ಡಿ ಆರ್.ಎಲ್, ಮತ್ತು ಡಾ. ಶಶಿಧರ್ ಕೆ.ಆರ್, ರವರು ಹಿಪ್ಪುನೇರಳೆ ಬೇಸಾಯದಲ್ಲಿ ಮಣ್ಣು ಪರೀಕ್ಷೆಯ ಮಹತ್ವ, ಪೋಷಕಾಂಶಗಳ ನಿರ್ವಹಣೆ ಮತ್ತು ಸಮಗ್ರ ಪೀಡೆ ನಿರ್ವಹಣೆ ಬಗ್ಗೆ ತಿಳಿಸಿದರು. ನಂತರ, ಮಾದರಿ ರೇಷ್ಮೆ ಬೆಳೆಗಾರರಾದ ನಾರಾಯಣಪ್ಪ, ಪಾರ್ಶ್ವಗಾನಹಳ್ಳಿ, ವೆಂಕಟರಾಮಯ್ಯ, ಹೊನ್ನೆನಹಳ್ಳಿ, ತಮ್ಮ ತೋಟಗಳಲ್ಲಿ ಅಳವಡಿಸಿಕೊಂಡಿರುವ ಹಿಪ್ಪುನೇರಳೆ ಮರಬೇಸಾಯ ಪದ್ಧತಿ ಮತ್ತು ಅದರ ಅನುಕೂಲತೆಗಳ ಬಗ್ಗೆ ತಮ್ಮ ಅನಿಸಿಕೆಗಳನ್ನು ರೇಷ್ಮೆ ಬೆಳೆಗಾರರೊಂದಿಗೆ ಹಂಚಿಕೊಂಡರು. ಸದರಿ ಕಾರ್ಯಕ್ರಮದಲ್ಲಿ ಕೋಲಾರ ತಾಲ್ಲೂಕಿನ ರೇಷ್ಮೆ ಸಹಾಯಕ ನಿರ್ದೇಶಕರಾದ ಬಿ.ಎಲ್ ಕೃಷ್ಣಪ್ಪ, ರೇಷ್ಮೆ ವಿಸ್ತರಣಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ತಾಂತ್ರಿಕ ಸಹಾಯಕರು ಬಸವರಾಜು, ಸೇರಿಕೇರ್ ಪ್ರೈ.ಲಿ. ಸುರೇಶ್ ಭಾಗವಹಿಸಿದ್ದರು. ಸುಮಾರು 110 ರೇಷ್ಮೆ ಬೆಳೆಗಾರರು ಕಾರ್ಯಕ್ರಮದಲ್ಲಿ ಭಾಗವಹಿಸಿ ಇದರ ಪ್ರಯೋಜನವನ್ನು ಪಡೆದುಕೊಂಡರು.

## ತರಬೇತಿ ಕಾರ್ಯಕ್ರಮಗಳು

ಕೋಲಾರ ಜಿಲ್ಲೆಯ ರೇಷ್ಮೆ ಕೃಷಿಕರಿಗೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಮತ್ತು ರೇಷ್ಮೆಇಲಾಖೆ ಕೋಲಾರ ಇವರ ಸಂಯುಕ್ತಶ್ರಾಯದಲ್ಲಿ ತಾಂತ್ರಿಕ ಸೇವಾ ಕೇಂದ್ರವಾರು ರೇಷ್ಮೆ ಬೆಳೆಗಾರರಿಗೆ ಒಂದು ದಿನದ ತಾಂತ್ರಿಕ ತರಬೇತಿ ಕಾರ್ಯಕ್ರಮಗಳನ್ನು ಕೃಷಿ ವಿಜ್ಞಾನ ಕೇಂದ್ರ ಕೋಲಾರದಲ್ಲಿ ಹಮ್ಮಿಕೊಳ್ಳಲಾಗಿತ್ತು. ದಿನಾಂಕ 05.07.2016 ರಂದು ಕೋಲಾರ ಜಿಲ್ಲೆಯ ರೇಷ್ಮೆ ಇಲಾಖೆ ಉಪನಿರ್ದೇಶಕರಾದ ಶ್ರೀ. ಎಸ್.ವಿ. ಕುಮಾರ್ ತರಬೇತಿ





ಕಾರ್ಯಕ್ರಮದ ಉದ್ಘಾಟನೆಯನ್ನು ನರವೇರಿಸಿ ರೇಷ್ಮೆ ಬೆಳೆಗಾರರು ಇತ್ತೀಚಿನ ತಾಂತ್ರಿಕತೆಗಳಾದ ಮರ ಪದ್ಧತಿ, ದ್ವಿತಳಿ ಹುಳು ಸಾಕಾಣಿಕೆ ತಾಂತ್ರಿಕತೆಗಳ ಬಗ್ಗೆ ತಿಳಿಸಿದರು. ತೋಟಗಾರಿಕೆ ಮಹಾವಿದ್ಯಾಲಯ ಕೋಲಾರ ಡೀನ್‌ರಾದ ಡಾ. ಕೆ.ಎನ್.ಶ್ರೀನಿವಾಸ್ ಅಧ್ಯಕ್ಷತೆ ವಹಿಸಿ

ಕೋಲಾರ ಜಿಲ್ಲೆಯ ರೇಷ್ಮೆ ಕೃಷಿಯ ಬಗ್ಗೆ ಮಾಹಿತಿ ನೀಡಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ಡಾ. ಪಿ. ಸುಧಾಕರ್. ವಿಜ್ಞಾನಿಗಳು, ಪ್ರಾದೇಶಿಕ ರೇಷ್ಮೆ ಸಂಶೋಧನ ಸಂಸ್ಥೆ, ಬೆಂಗಳೂರು ಹಿಪ್ಪುನೇರಳೆ ಬೇಸಾಯದಲ್ಲಿ ಮಣ್ಣು ಪರೀಕ್ಷೆಯ ಮಹತ್ವ ಮತ್ತು ಪೋಷಕಾಂಶಗಳ ನಿರ್ವಹಣೆ, ಚಿಂತಾಮಣಿ ಕೃಷಿ ವಿಜ್ಞಾನ ಕೇಂದ್ರ ಕೋಲಾರದ ಮುಖ್ಯಸ್ಥರಾದ ಡಾ. ಮಂಜುನಾಥಗೌಡ ಮತ್ತು ಡಾ. ಶಶಿಧರ್, ಕೆ. ಆರ್. ವಿಜ್ಞಾನಿ (ರೇಷ್ಮೆಕೃಷಿ) ಹಿಪ್ಪುನೇರಳೆ ಮತ್ತು ರೇಷ್ಮೆಹುಳುವಿನ ಪೀಡೆ ನಿರ್ವಹಣೆ. ಬಂಗಾರಪೇಟೆ ರೇಷ್ಮೆ ಸಹಾಯಕ ನಿರ್ದೇಶಕರಾದ ಎಸ್.ಎನ್. ಶ್ರೀನಿವಾಸ್ ದ್ವಿತಳಿ ಹುಳು ಸಾಕಾಣಿಕಾ ತಾಂತ್ರಿಕತೆಗಳ ಬಗ್ಗೆ ಮಾಹಿತಿ ನೀಡಿದರು. ಸೇರಿಕೆರ್ ಪ್ರೈ. ಲೀ. ಸುರೇಶ್, ರೇಷ್ಮೆ ಇಲಾಖೆ ಅಧಿಕಾರಿಗಳು ಹಾಗೂ ಸುಮಾರು 50 ರೈತರು ತರಬೇತಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಿದ ವಿವರ

| ಕ್ರಮ ಸಂಖ್ಯೆ | ದಿನಾಂಕ | ತರಬೇತಿ ವಿಷಯ | ತಾಂತ್ರಿಕ ಸೇವಾ ಕೇಂದ್ರ | ಭಾಗವಹಿಸಿದ ರೈತರ ಸಂಖ್ಯೆ |
|---|---|---|---|---|
| 1 | 05.07.16 | ರೇಷ್ಮೆಕೃಷಿಯಲ್ಲಿ ಆಧುನಿಕ ತಾಂತ್ರಿಕತೆಗಳು | ವೇಮಗಲ್, ಕೋಲಾರ, | 50 |
| 2 | 20.07.16 | ಹಿಪ್ಪುನೇರಳೆ ಬೇಸಾಯದಲ್ಲಿ ಸುಧಾರಿತ ಉತ್ಪಾದನ ತಾಂತ್ರಿಕತೆಗಳು | ಶ್ರೀನಿವಾಸಪುರ, ಗೌನಿಪಲ್ಲಿ | 25 |
| 3 | 05.08.16 | ಹಿಪ್ಪುನೇರಳೆ ಮರ ಬೇಸಾಯ ಪದ್ಧತಿ ಮತ್ತು ದ್ವಿತಳಿ ಹುಳು ಸಾಕಾಣಿಕಾ ತಾಂತ್ರಿಕತೆಗಳು | ಮಾಸ್ತಿ, ಮಾಲೂರು, | 30 |
| 4 | 27.08.16 | ಹಿಪ್ಪುನೇರಳೆ ಬೇಸಾಯದಲ್ಲಿ ಸಮಗ್ರ ಪೋಷಕಾಂಶಗಳು, ಮರ ಪದ್ಧತಿ ಮತ್ತು ದ್ವಿತಳಿ ರೇಷ್ಮೆಹುಳು ನಿರ್ವಹಣೆ | ಕಾಮಸಮುದ್ರ, ಬಂಗಾರಪೇಟೆ | 25 |
| 5 | 15.09.16 | ಹಿಪ್ಪುನೇರಳೆ ಬೇಸಾಯದಲ್ಲಿ ಮರಪದ್ಧತಿ ನಿರ್ವಹಣೆ | ಬೈರಕೂರು, ಮುಳಬಾಗಿಲು | 25 |
| 6 | 21.09.16 | ಹಿಪ್ಪುನೇರಳೆ ಬೇಸಾಯದಲ್ಲಿ ಸಮಗ್ರ ಪೋಷಕಾಂಶಗಳು ಮತ್ತು ಮರಪದ್ಧತಿ ನಿರ್ವಹಣೆ | ವಕ್ಕಲೇರಿ, ಹೋಳೂರು | 30 |

ಕೃಷಿ ವಿಜ್ಞಾನ ಕೇಂದ್ರ ಮತ್ತು ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಕೋಲಾರ ಸಹಯೋಗದಲ್ಲಿ **"ಮಾವಿನಲ್ಲಿ ಆಧುನಿಕ ಬೇಸಾಯ ಪದ್ಧತಿ"** ಯ ತರಬೇತಿ ಕಾರ್ಯಕ್ರಮವನ್ನು ದಿನಾಂಕ 23.08.2016 ರಂದು ಪಿಲ್ಲಿಕುಂಟೆ ಗ್ರಾಮದಲ್ಲಿ ಹಮ್ಮಿಕೊಳ್ಳಲಾಯಿತು. ಕೃಷಿ ವಿಜ್ಞಾನ ಕೇಂದ್ರ ಕೋಲಾರದ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಕೆ. ತುಳಸಿರಾಮ್‌ರವರು ಮಾವಿನಲ್ಲಿ ಬರುವ ಮುಖ್ಯ ಕೀಟಗಳು ಮತ್ತು ಅವುಗಳ ನಿರ್ವಹಣೆಯ ಬಗ್ಗೆ ಮಾಹಿತಿಯನ್ನು ತಿಳಿಸಿದರು. ತೋಟಗಾರಿಕೆ ವಿಜ್ಞಾನಿಗಳಾದ ಡಾ. ನಾಗರಾಜರವರು ಮಾವಿನ ಆಧುನಿಕ ಬೇಸಾಯದ ಬಗ್ಗೆ ಮಾಹಿತಿ ನೀಡಿದರು. ಸುಮಾರು 60 ರೈತರು ಮತ್ತು ರೈತ ಮಹಿಳೆಯರು ಈ ತರಬೇತಿಯ ಪ್ರಯೋಜನ ಪಡೆದುಕೊಂಡರು.





ದಿನಾಂಕ.24.08.2016 ರಂದು ಕೆಂಚಾಪುರ ಗ್ರಾಮದಲ್ಲಿ **"ಸೀಬೆಯಲ್ಲಿ ಲಘುಪೋಷಕಾಂಶಗಳ ನಿರ್ವಹಣೆಯ** ಬಗ್ಗೆ ತರಬೇತಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ನಾಗರಾಜ ಕೆ.ಎಸ್, ಡಾ. ರಘುನಾಥರೆಡ್ಡಿ ಆರ್.ಎಲ್ ಮತ್ತು ಡಾ. ಸಂತೋಷ್ ಹೆಚ್.ಎಂ. ಭಾಗವಹಿಸಿ ಸೀಬೆಯಲ್ಲಿ ಮುಖ್ಯ ಹಾಗೂ ಲಘುಪೋಷಕಾಂಶಗಳ ನಿರ್ವಹಣೆ, ಸುಧಾರಿತ ಬೇಸಾಯ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಸುಮಾರು 40 ರೈತ ಮತ್ತು ರೈತ ಮಹಿಳೆಯರು ಭಾಗವಹಿಸಿ ತರಬೇತಿಯ ಪ್ರಯೋಜನ ಪಡೆದುಕೊಂಡರು.

## ಕ್ಷೇತ್ರೋತ್ಸವ

ದಿನಾಂಕ 24.08.2016 ರಂದು ಮಲ್ಲಾಂಡಹಳ್ಳಿ ಗ್ರಾಮದಲ್ಲಿ **"ಟೊಮ್ಯಾಟೊ ಬೆಳೆ"** ಕ್ಷೇತ್ರೋತ್ಸವವನ್ನು ಹಮ್ಮಿಕೊಳ್ಳಲಾಯಿತು. ಸದರಿ ಕಾರ್ಯಕ್ರಮದಲ್ಲಿ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳಾದ ಡಾ. ನಾಗರಾಜ ಕೆ.ಎಸ್ ಟೊಮ್ಯಾಟೊ ಬೆಳೆಯಲ್ಲಿ ಹನಿರಸಾವರಿಯ ತಾಂತ್ರಿಕತೆ ಹಾಗೂ ಮಹತ್ವದ ಬಗ್ಗೆ ವಿವರಿಸಿದರು. ನಂತರ ವಿಜ್ಞಾನಿಗಳಾದ ಡಾ. ರಘುನಾಥರೆಡ್ಡಿ ಆರ್.ಎಲ್ ಮತ್ತು ಡಾ. ಸಂತೋಷ್ ಹೆಚ್.ಎಂ ರವರು ಟೊಮ್ಯಾಟೊ ಬೆಳೆಯಲ್ಲಿ ಪೋಷಕಾಂಶಗಳ ಮಹತ್ವ ಮತ್ತು ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಸುಮಾರು 25 ರೈತರು ಭಾಗವಹಿಸಿ ಇದರ ಪ್ರಯೋಜನ ಪಡೆದುಕೊಂಡರು.





ದಿನಾಂಕ. 23.09.2016 ರಂದು ಕೆಂಚಾಪುರ ಗ್ರಾಮದಲ್ಲಿ **"ಸೀಬೆ ಬೆಳೆ" ಕ್ಷೇತ್ರೋತ್ಸವನ್ನು** ಹಮ್ಮಿಕೊಳ್ಳಲಾಯಿತು. ಈ ಕ್ಷೇತ್ರೋತ್ಸವದಲ್ಲಿ ಡಾ. ನಾಗರಾಜ ವಿಜ್ಞಾನಿ (ತೋಟಗಾರಿಕೆ) ರವರು ಸೀಬೆ ಬೆಳೆಯಲ್ಲಿ ಲಘುಪೋಷಕಾಂಶಗಳ ಮಹತ್ವ ಮತ್ತು ನಿರ್ವಹಣೆ ಬಗ್ಗೆ ಕ್ಷೇತ್ರೋತ್ಸವದ ಮೂಲಕ ರೈತರಿಗೆ ತಿಳಿಸಿಕೊಟ್ಟರು. ಪ್ರಸ್ತುತ ಕಾರ್ಯಕ್ರಮದಲ್ಲಿ ಮಣ್ಣು ವಿಜ್ಞಾನದ ವಿಜ್ಞಾನಿಗಳಾದ ಡಾ. ರಘುನಾಥ ರೆಡ್ಡಿ ಆರ್.ಎಲ್ ಮತ್ತು ಕಾರ್ಯಕ್ರಮ ಸಹಾಯಕರಾದ ಡಾ. ಸಂತೋಷ ಹೆಚ್.ಎಂ ಭಾಗವಹಿಸಿದ್ದರು. ಸುಮಾರು 15 ರೈತರು ಈ ಕ್ಷೇತ್ರೋತ್ಸವದ ಪ್ರಯೋಜನ ಪಡೆದುಕೊಂಡರು.

## ತ್ರೈಮಾಸಿಕ ಕಾರ್ಯಾಗಾರ



ದಿನಾಂಕ 25.08.2016 ತೋಟಗಾರಿಕೆ ಮಹಾವಿದ್ಯಾಲಯ ಮತ್ತು ಕೃಷಿ ವಿಜ್ಞಾನ ಕೇಂದ್ರ, ಕೋಲಾರ ಸಹಯೋಗದಲ್ಲಿ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ **"ತ್ರೈಮಾಸಿಕ ಕಾರ್ಯಾಗಾರ"** ಏರ್ಪಡಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕೋಲಾರ, ಚಿಕ್ಕಬಳ್ಳಾಪೂರ ಮತ್ತು ರಾಮನಗರ ಜಿಲ್ಲೆಯ ತೋಟಗಾರಿಕೆ ಇಲಾಖೆಯ ತೋಟಗಾರಿಕೆ ನಿರ್ದೇಶಕರುಗಳು ಮತ್ತು ತೋಟಗಾರಿಕೆ ಅಧಿಕಾರಿಗಳು ಭಾಗವಹಿಸಿದ್ದರು. ಡೀನ್‌ರಾದ ಡಾ. ಕೆ.ಎನ್ ಶ್ರೀನಿವಾಸ್‌ರವರು ಅಧ್ಯಕ್ಷತೆಯನ್ನು ವಹಿಸಿ ಹಣ್ಣು ಬೆಳೆಗಳಲ್ಲಿ ಕೈಕೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿದರು. ಕೋಲಾರ ತಾಲ್ಲೂಕಿನ ಸಹಾಯಕ ತೋಟಗಾರಿಕೆ ನಿರ್ದೇಶಕರು ಮಾವಿನ ಬೆಳೆಯಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಿದರು. ಕೃಷಿ ವಿಜ್ಞಾನ ಕೇಂದ್ರ ವಿಜ್ಞಾನಿಗಳಾದ ಡಾ. ರಘುನಾಥರೆಡ್ಡಿ ಆರ್. ಎಲ್ ರವರು ದೊಣ್ಣಮೆಣಸಿನಕಾಯಿ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ, ಡಾ. ನಾಗರಾಜ ಕೆ.ಎಸ್. ರವರು ಹೂ ಬಿಡುವ ಮುಂಚಿನ ಮಾವಿನ ನಿರ್ವಹಣೆ ಮತ್ತು ದಾಳಿಂಬೆಯಲ್ಲಿ ಆಧುನಿಕ ಬೇಸಾಯದ ಬಗ್ಗೆ ಮಾಹಿತಿ ನೀಡಿದರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಕೆ. ತುಳಸಿರಾಮ್ ಹಾಗೂ ಸಹಾಯಕ ಪ್ರಾಧ್ಯಾಪಕರಾದ ಡಾ. ಮಂಜುನಾಥ ರೆಡ್ಡಿರವರು ಪ್ರಮುಖ ತೋಟಗಾರಿಕೆ ಬೆಳೆಯಲ್ಲಿ ಬರುವ ಕೀಟ ಮತ್ತು ರೋಗಗಳ ನಿರ್ವಹಣೆ ಬಗ್ಗೆ ತಿಳಿಸಿದರು. ಸಭೆಗೆ ತರಲಾಗಿದ್ದ ವಿವಿಧ ತರಕಾರಿ ಬೆಳೆಗಳ ರೋಗ ಮತ್ತು ಕೀಟ ಭಾದಿತ ಮಾದರಿಗಳನ್ನು ವಿಜ್ಞಾನಿಗಳ ಸಮ್ಮುಖದಲ್ಲಿ ಚರ್ಚಿಸಿ ಸೂಕ್ತ ಪರಿಹಾರವನ್ನು ನೀಡಲಾಯಿತು. ಸುಮಾರು 60 ಹಿರಿಯ ಅಧಿಕಾರಿ ವರ್ಗದವರು ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು.

## ಕೃಷಿ ಅಭಿಯಾನ 2016-17

ಕೃಷಿ ಇಲಾಖೆ ಮತ್ತು ಕೃಷಿಗೆ ಸಂಬಂಧಿಸಿದ ವಿವಿಧ ಅಭಿವೃದ್ಧಿ ಇಲಾಖೆಗಳ ಸಮನ್ವಯದೊಂದಿಗೆ ಸಮೂಹ ಕಾರ್ಯಕ್ರಮವಾದ **"ಕೃಷಿ ಅಭಿಯಾನ"** ವನ್ನು ಜುಲೈ ಮತ್ತು ಅಗಸ್ಟ್ ತಿಂಗಳಿನಲ್ಲಿ ಕೋಲಾರ, ಬಂಗಾರಪೇಟೆ, ಶ್ರೀನಿವಾಸಪುರ ಮತ್ತು ಮುಳಬಾಗಿಲು ತಾಲ್ಲೂಕುಗಳಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮಗಳಲ್ಲಿ ಈ ಕೆಳಕಂಡಂತೆ ಕೃಷಿ ವಿಜ್ಞಾನ ಕೇಂದ್ರ, ಕೋಲಾರದ ವಿಜ್ಞಾನಿಗಳು ಭಾಗವಹಿಸಿ ರೈತರೊಂದಿಗೆ ಸಂವಾದ ಕಾರ್ಯಕ್ರಮದಲ್ಲಿ ಕೃಷಿ ಬೆಳೆಗಳಿಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರವನ್ನು ನೀಡಿದರು.

| ಸಂಖ್ಯೆ | ದಿನಾಂಕ | ಹೋಬಳಿ | ತಾಲ್ಲೂಕು | ಭಾಗವಹಿಸಿದ ವಿಜ್ಞಾನಿಗಳು |
|---|---|---|---|---|
| 1. | 02.07.2016 | ತಾಯಲೂರು | ಮುಳಬಾಗಿಲು | ಡಾ. ನಾಗರಾಜ್ ಕೆ.ಎಸ್. |
| 2. | 02.07.2016 | ಅರಳಕುಂಟೆ | ಬಂಗಾರಪೇಟೆ | ಡಾ ಶಶಿಧರ್ ಕೆ.ಅರ್, ಡಾ. ಸಂತೋಷ್ ಹೆಚ್.ಎಂ. |
| 3. | 05.07.2016 | ಮುಳಬಾಗಿಲು | ಮುಳಬಾಗಿಲು | ಡಾ. ರಘುನಾಥರೆಡ್ಡಿ ಆರ್.ಎಲ್. |
| 4. | 09.07.2016 | ಛತ್ರಕೋಡಿಹಳ್ಳಿ | ಕೋಲಾರ | ಡಾ. ರಘುನಾಥರೆಡ್ಡಿ ಆರ್.ಎಲ್, ಡಾ. ನಾಗರಾಜ್ ಕೆ.ಎಸ್. |
| 5. | 16.07.2016 | ಬಡಮಾಕನಹಳ್ಳಿ | ಬಂಗಾರಪೇಟೆ | ಡಾ ಶಶಿಧರ್ ಕೆ.ಅರ್, ಡಾ. ಸುಭಾಶ್. |
| 6. | 23.07.2016 | ಶ್ರೀನಿವಾಸಸಂದ್ರ | ಬಂಗಾರಪೇಟೆ | ಡಾ. ರಘುನಾಥರೆಡ್ಡಿ ಆರ್.ಎಲ್, ಡಾ. ಸಂತೋಷ್ ಹೆಚ್.ಎಂ. |
| 7. | 11.08.2016 | ಶೆಟ್ಟಿಹಳ್ಳಿ | ಶ್ರೀನಿವಾಸಪುರ | ಡಾ. ರಘುನಾಥರೆಡ್ಡಿ ಆರ್.ಎಲ್, ಡಾ. ಸಂತೋಷ್ ಹೆಚ್.ಎಂ. |
| 8. | 16.08.2016 | ತೊಟ್ಲಿ, ಸುಗಟೂರು | ಕೋಲಾರ | ಕೆ. ತುಳಸಿರಾಮ್, ಡಾ. ರಘುನಾಥರೆಡ್ಡಿ ಆರ್.ಎಲ್ |

# ತರಕಾರಿ ಬೆಳೆಗಳ ಸಂರಕ್ಷಿತ ಬೇಸಾಯ ಹಾಗೂ ಕ್ಷೇತ್ರೋತ್ಸವ



ದಿನಾಂಕ 16.09.2016 ರಂದು ತೋಟಗಾರಿಕೆ ಮಹಾವಿದ್ಯಾಲಯ, ಕೃಷಿ ವಿಜ್ಞಾನ ಕೇಂದ್ರ ಹಾಗೂ ಸಮಗ್ರ ಕೃಷಿ ಯೋಜನೆ ಕೋಲಾರ ಇವರ ಸಂಯುಕ್ತಾಶ್ರಯದಲ್ಲಿ **"ತರಕಾರಿ ಬೆಳೆಗಳ ಸಂರಕ್ಷಿತ ಬೇಸಾಯ ಹಾಗೂ ಕ್ಷೇತ್ರೋತ್ಸವ"** ಕಾರ್ಯಕ್ರಮವನ್ನು ತೋಟಗಾರಿಕೆ ಮಹಾವಿದ್ಯಾಲಯ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಉದ್ಘಾಟನೆಯನ್ನು ಶ್ರೀ ರಘುನಾಥ, ತೋಟಗಾರಿಕೆ ಉಪನಿರ್ದೇಶಕರು, ಜಿಲ್ಲಾ ಪಂಚಾಯತ್, ಚಿಕ್ಕಬಳ್ಳಾಪುರ ಹಾಗೂ ಡಾ. ಬಸವರಾಜು ಟಿ.ಬಿ. ಪ್ರಾಧ್ಯಾಪಕರು, ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ ನೆರವೇರಿಸಿದರು. ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದ ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ, ಹಾಸನ ಮುಖ್ಯಸ್ಥರಾದ ಡಾ. ಹೆಚ್. ಅಮರನಂಜುಂಡೇಶ್ವರವರು ಕರ್ಬೂಜ, ಕಲ್ಲಂಗಡಿ, ಸೌತೇಕಾಯಿ, ಟೊಮ್ಯಾಟೊ, ದೊಣ್ಣಮೆಣಸಿನಕಾಯಿ, ತಿಂಗಳಹುರುಳಿ ಹಾಗೂ ಕಾರಮಣಿ ಅಲಸಂದಿ ಬೆಳೆಗಳ ಸಂರಕ್ಷಿತ ಬೇಸಾಯ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಸದಾನಂದ ಮುಶ್ರೀಫ್ ಹಾಗೂ ಡಾ. ದೊಡ್ಡಬಸಪ್ಪ ಬಿ. ರವರು ಸಂರಕ್ಷಿತ ಬೇಸಾಯದಲ್ಲಿ ತರಕಾರಿ ಬೆಳೆಗಳಿಗೆ ಬರುವ ರೋಗ ಮತ್ತು ಕೀಟಗಳ ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಸದರಿ ಕಾಯಕ್ರಮದಲ್ಲಿ ರಿಜ್ವಾನ್ ಸೀಡ್ಸ್ ಪ್ರೈ. ಲಿ. ವೇಣುಗೋಪಾಲರೆಡ್ಡಿ, ನಾಮಧಾರಿ ಸೀಡ್ಸ್ ಪ್ರೈ.ಲಿ. ಶಂಕರನಂದ, ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರಾದ ಕೆ. ತುಳಸಿರಾಮ್, ತೋಟಗಾರಿಕೆ ಸಂಶೋಧನ ಮತ್ತು ವಿಸ್ತರಣಾ ಕೇಂದ್ರ, ಹೊಗಳಗೆರೆ ಮುಖ್ಯಸ್ಥರಾದ ಡಾ. ವಿಷ್ಣುವರ್ಧನ, ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ನಂತರ ಡಾ. ಅರವಿಂದಕುಮಾರ ಜೆ. ಹಾಗೂ ಡಾ. ಎ.ಎಂ. ರಾಜೇಶ್‌ರವರು ಹಸಿರು ಮನೆಯಲ್ಲಿ ತರಕಾರಿ ಬೆಳೆಗಳ ತಾಂತ್ರಿಕತೆ ಮತ್ತು ಪ್ರಾತ್ಯಕ್ಷಿಕೆ ಬಗ್ಗೆ ರೈತರಿಗೆ ವಿವರಿಸಿದರು. ಸದರಿ ಕಾರ್ಯಕ್ರಮದಲ್ಲಿ ತೋಟಗಾರಿಕೆ ಮಹಾವಿದ್ಯಾಲಯ ಹಾಗೂ ಕೃಷಿ ವಿಜ್ಞಾನ ಕೇಂದ್ರದ ಪ್ರಾಧ್ಯಾಪಕ ವೃಂದದವರು, ಇಲಾಖಾ ಅಧಿಕಾರಿಗಳು, ಸುಮಾರು 80 ರೈತರು ಹಾಗೂ ಅಂತಿಮ ವರ್ಷದ ವಿದ್ಯಾರ್ಥಿಗಳು ಭಾಗವಹಿಸಿದ್ದರು.



# ವಿಸ್ತರಣಾ ನಿರ್ದೇಶಕರ ಭೇಟಿ

ದಿನಾಂಕ 22.07.2016 ರಂದು ಬಾಗಲಕೋಟೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ವಿಸ್ತರಣಾ ನಿರ್ದೇಶಕರಾದ ಡಾ. ವೈ.ಕೆ. ಕೋಟಿಕಲ್ ರವರು ಕೃಷಿ ವಿಜ್ಞಾನ ಕೇಂದ್ರ, ಕೋಲಾರಕ್ಕೆ ಭೇಟಿ ನೀಡಿ ವಿಜ್ಞಾನಿಗಳೊಂದಿಗೆ ವಿಸ್ತರಣಾ ಚಟುವಟಿಕೆಗಳ ಬಗ್ಗೆ ಚರ್ಚಿಸಿ ನಂತರ ಕ್ಷೇತ್ರದಲ್ಲಿ ನಿರ್ಮಿಸಿರುವ ಕೃಷಿ ಹೊಂಡ ನೀರಿನ ಬಳಕೆಯ ಬಗ್ಗೆ ಪರಿಶೀಲಿಸಿದರು.




**ಸಂಪಾದಕರು** : ಕೆ. ತುಳಸಿರಾಮ್
**ಸಹ ಸಂಪಾದಕರು** : ಡಾ. ಶಶಿಧರ್ ಕೆ. ಆರ್.
**ಸಹಾಯಕ ಸಂಪಾದಕರು** : ಡಾ. ರಘುನಾಥರೆಡ್ಡಿ ಆರ್. ಎಲ್.
ಡಾ. ನಾಗರಾಜ ಕೆ. ಎಸ್.
ಡಾ. ಚಿಕ್ಕಣ್ಣ ಜಿ. ಎಸ್.
ಡಾ. ಸಂತೋಷ್ ಹೆಚ್. ಎಂ.
ಉಮೇಶ್ ನಾಯ್ಕ
**ಪುಟ ವಿನ್ಯಾಸ** : ಸಿ.ಎಸ್. ಜ್ಞಾನಸುಧ
**ಅಕ್ಷರ ಜೋಡಣೆ** : ಸಾವಿತ್ರಿ ಜಿ. ರುದ್ರಾಪೂರ

**ಪ್ರಕಾಶಕರು :**
ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರು
ಐಸಿಎಆರ್ – ಕೃಷಿ ವಿಜ್ಞಾನ ಕೇಂದ್ರ, ಕೋಲಾರ–563 103





**ಪ್ರತಿ ಸೋಮವಾರ – ರೈತರಿಗೆ ಪರಿಹಾರ**
ಸ್ಥಳ : ತೋಟಗಾರಿಕೆ ಮಹಾವಿದ್ಯಾಲಯ, ಕೋಲಾರ
ಕೃಷಿ ವಿಜ್ಞಾನ ಕೇಂದ್ರ, ಕೋಲಾರ
ಸಮಯ : ಬೆಳಿಗ್ಗೆ 9.30 ರಿಂದ ಸಂಜೆ 4.30